

## ಎಚ್.ಎಸ್. ವೆಂಕಟೇಶ ಮೂರ್ತಿ

ನಾನಿನ್ನೂ ಕನ್ನಡವನ್ನು ಓದದಷ್ಟು ಚಿಕ್ಕವನಾಗಿದ್ದಾಗ ಕಿವಿಯ ಮೂಲಕ ಹಾಡು ನನ್ನನ್ನು ಪ್ರವೇಶಿಸಿತು. ನಮ್ಮ ಅಮ್ಮನ ಹಾಡಿನ ಮೂಲಕ ಪುರಂದರ, ಕನಕರು ನನಗೆ ಆಪ್ತರಾದರು. ನಮ್ಮೂರಿನ ಭಜನಾ ಮಂಡಲಿಯವರು ನಸುಕಿನಲ್ಲೇ ಬೀದಿಯಲ್ಲಿ ನಿಜಗುಣರನ್ನು, ಷರೀಫರನ್ನು ಹಾಡುತ್ತಾ ಬರುತ್ತಿದ್ದರು. ನಮ್ಮ ಊರಿಗೆ ನಾಟಕ ಕಲಿಸಲು ಬಂದ ಉದ್ದುಗೂದಲಿನ ನಾಟಕಮಾಸ್ತರು ಒಂದು ದಿನ ನಮ್ಮ ಮನೆಗೂ ಬಂದು ಬಸವಣ್ಣನವರ ವಚನಗಳನ್ನು ಹಾಡಿದರು. ಬೆಳಗಿನ ಜಾವ ನಮ್ಮ ಕೇರಿಯ ಹಿರಿಯರೊಬ್ಬರು ಕುಮಾರವ್ಯಾಸ, ಲಕ್ಷ್ಮೀಶರನ್ನು ಗಮಕರೂಪದಲ್ಲಿ ವಾಚನ ಮಾಡುತ್ತಿದ್ದುದು ನಮಗೆ ಬೆಳಗಿನ ಸುಪ್ರಭಾತವಾಗುತ್ತಿತ್ತು. ಗುಡಿಯಮುಂದೆ ನಡೆಯುತ್ತಿದ್ದ ಕೋಲಾಟಗಳು ಜನಪದ ಲಾವಣಿಗಳನ್ನು, ಆ ಲಾವಣಿಗಳ ಆಕರ್ಷಕ ಲಯವನ್ನು ನನಗೆ ಉಣಬಡಿಸಿತು. ಆಗಲೇ ನನ್ನ ಕಾಲುಗಳು ಕುಣಿತದ ಲಯವನ್ನು ಹಿಡಿಯುವ ಯತ್ನದಲ್ಲಿ ತೊಡಗಿದವು. ಗಂಗೂರು ಬೊಂಬೆ ಮೇಳದವರ ನಾಂದಿಪದ್ಯ ಕಾಳ ಬೆಳದಿಂಗಳು ಈ ಸಂಸಾರ ಎಂಬ ಹಾಡು! ಅದು ದಾಸರ ಪದ ಎಂಬುದು ನನಗೆ ಗೊತ್ತಾದದ್ದು ಎಷ್ಟೋ ವರ್ಷಗಳು ಕಳೆದ ಮೇಲೆ!

ನಾನು ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗ ಓದಿನ ಹುಚ್ಚು ನನಗೆ ಹಿಡಿಯಿತು. ಕೈಗೆ ಸಿಕ್ಕ ಪುಸ್ತಕವನ್ನು ಓದಿ ಮುಗಿಸುವ ಬೆಂಕಿ ಹಸಿವು ಅದು. ಮನೆಯಲ್ಲಿ ಇದ್ದ ಪುಸ್ತಕಗಳೆಲ್ಲಾ ಮುಗಿದವು. ಪಕ್ಕದ ಮನೆಯ ತರುಣ ಚಿತ್ರದುರ್ಗದಿಂದ ತರುತ್ತಿದ್ದ ತರಾಸು ಕಾದಂಬರಿಗಳನ್ನು ಸಂಜೆಯ ಬೆಳಕಲ್ಲಿ ತನ್ಮಯತೆಯಿಂದ ಓದುತ್ತಿದ್ದ ನೆನಪುಗಳು ನನಗಿವೆ. ಆಗಿನ್ನೂ ನಮ್ಮೂರಿಗೆ ಲೈಟು ಬಂದಿರಲಿಲ್ಲ. ಸಂಧ್ಯಾಸೂರ್ಯನ ಕೆಂಬೆಳಕು ಓದಿಗೆ ಲಾಯಕ್ಕಾದ ಬೆಳಕಾಗಿತ್ತು. ನನ್ನ ಜಗಲಿಯ ಓದು ನಿರಂತರವಾಗಿ ಮುಂದುವರೆಯಿತು! ಹೆಚ್ಚಾಗಿ ಕಥೆ ಕಾದಂಬರಿಗಳನ್ನು ಓದುತ್ತಿದ್ದೆ. ನಮ್ಮೂರಲ್ಲಿ ಹೈಸ್ಕೂಲಿರಲಿಲ್ಲ. ಹನ್ನೆರಡು ಮೈಲು ದೂರದ ಹೊಳಲಕೆರೆಯಲ್ಲಿ ನೆಂಟರ ಮನೆಯಲ್ಲಿ ಉಳಿದು ನಾನು ಅಭ್ಯಾಸ ಮುಂದುವರೆಸಿದ್ದು. ಶಾಲೆಯ ಪುಸ್ತಕಗಳ ನಡುವೆ ಸಮಯ ದೊರೆತಾಗಲೆಲ್ಲಾ